Indian Red Cross Society
Karnataka State Branch

ವಿಶ್ವ ಜಿನಿವಾ ದಿನ

—

ಆಗಸ್ಟ್ 12

DEVELOPED BY YOUTH RED CROSS, IRCS, KSB, BENGALURU

Indian Red Cross Society
Karnataka State Branch

ರೆಡ್ ಕ್ರಾಸ್–ಸಾಲ್ಫೆರಿನೋ

- ಅಂತರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯ ಉಗಮ ಮಾನವ ಇತಿಹಾಸದ ಒಂದು ಮಹತ್ತರ ಮೈಲಿಗಲ್ಲು.
- 1859 ರ ಜೂನ್ 24 ರಂದು "ಸಾಲ್ಫೆರಿನೋ" ಕದನ, ಸತತ 15 ಗಂಟೆಗಳ ಯುದ್ಧ.
- ಒಂದೆಡೆ ಫ್ರಾನ್ಸ್ ಮತ್ತು ಇಟಲಿಯ ಸಂಯುಕ್ತ ಸೈನ್ಯ ಇನ್ನೊಂದೆಡೆ ಆಸ್ಟ್ರೀಯಾದ ಸೈನ್ಯ ರಣರಂಗದಲ್ಲಿ ಭೀಕರವಾಗಿ ಕಾದಾಡಿದವು.
- 3 ಲಕ್ಷಕ್ಕೂ ಹೆಚ್ಚಿನ ಸೈನಿಕರು ಕಾದಾಡಿದರು ಮತ್ತು ಲಕ್ಷಾಂತರ ಮಂದಿ ಮೃತ ಪಟ್ಟರು. ಯುದ್ಧ ಮುಗಿದಾಗ ರಣರಂಗದ ತುಂಬೆಲ್ಲಾ ಹೆಣಗಳ ರಾಶಿಯೇ ಬಿದ್ದಿತ್ತು.

ಸಾಲ್ಫರಿನೋ ಯುದ್ಧ



Indian Red Cross Society
Karnataka State Branch

ಸಾಲ್ಫರಿನೋ ಯುದ್ಧ

- ಗಾಯಗೊಂಡವರಿಗೆ ಮತ್ತು ನೊಂದವರಿಗೆ ಸಾಂತ್ವನ ಹೇಳಲು ಉಪಚರಿಸಲು, ಆಸ್ಪತ್ರೆಗಳು ಮತ್ತು ವೈಧ್ಯರ ಸಂಖ್ಯೆ ಅತ್ಯಲ್ಪವಾಗಿತ್ತು.
- ನೊಂದವರ ಮತ್ತು ಗಾಯಾಳುಗಳ ಆಕ್ರಂದನ ಮುಗಿಲು ಮುಟ್ಟಿತು.
- ಹೆನ್ರಿ ಡ್ಯೂನಾಂಟ್ ಎಂಬ ಸ್ವಿಸ್ ವ್ಯಾಪಾರಿ, ಈ ದೃಷ್ಯವನ್ನು ಕಂಡು ಮಮ್ಮಲ ಮರುಗಿದನು.
- ಸ್ಥಳೀಯ ಗ್ರಾಮಸ್ಥರ ನೆರವಿನಿಂದ ಗಾಯಾಳುಗಳನ್ನು ಉಪಚರಿಸಿದನು.
- ಗಾಯಗೊಂಡ ಎಲ್ಲಾ ಸೈನಿಕರನ್ನು ಯಾವುದೇ ದೇಶ, ಧರ್ಮಗಳ ಭೇಧವಿಲ್ಲದೆ ಚರ್ಚುಗಳಲ್ಲಿ, ಆಶ್ರಮಗಳಲ್ಲಿ, ದೇಗುಲಗಳಲ್ಲಿ ಮತ್ತು ಸೇನಾ ಪಾಳಯಗಳಲ್ಲಿ ಉಪಚರಿಸಿದನು.

Indian Red Cross Society
Karnataka State Branch


ಯುದ್ಧಾನಂತರ,

- ದಿನ ಉರುಳಿ ಜನ ಯುದ್ಧವನ್ನು ಮರೆತರು, ಹೆನ್ರಿ ಡ್ಯೂನಾಂಟ್ ಮರೆಯಲಿಲ್ಲ.
- ಯುದ್ಧದ ಬಗೆಗಿನ ವಿವರಗಳನ್ನು "ದಿ ಮೆಮೋರಿ ಆಫ್ ಸಾಲ್ಫರಿನೋ" ಎಂಬ ಪುಸ್ತಕದಲ್ಲಿ ವಿವರಿಸಿ, ಜಗತ್ತಿನೆಲ್ಲೆಡೆ ಪರಿಚಯಿಸಿದನು.
- ಆತನ ಪರಿಶ್ರಮದ ಫಲವಾಗಿಯೇ ರೆಡ್ ಕ್ರಾಸ್ ಸಂಸ್ಥೆಯ ಉಗಮವಾಯಿತು.
- ಹೆನ್ರಿ ಡ್ಯೂನಾಂಟ್ ಇಚ್ಛೆಯಂತೆ ಅಂತರಾಷ್ಟ್ರೀಯ ಸ್ವಯಂ ಸೇವಕರ ಸಂಘಟನೆಯನ್ನು ಎಲ್ಲಾ ರಾಷ್ಟ್ರಗಳಲ್ಲಿ ಶಾಂತಿಕಾಲದಲ್ಲಿ ಪ್ರತಿಷ್ಠಾಪಿಸಲಾಯಿತು.
- ಇದರಲ್ಲಿನ ಸ್ವಯಂಸೇವಕರ ತಂಡವು ಯುದ್ಧ ಮುಗಿದ ಕೂಡಲೇ ಅಲ್ಲಿನ ಗಾಯಾಳುಗಳನ್ನು ಅವರ ರಾಷ್ಟ್ರೀಯತೆಯನ್ನು ಗಮನಿಸದೇ, ಉಪಚರಿಸಬೇಕು.
- ಇದನ್ನು ಸಾಧ್ಯವಾಗಿಸಲು ರಾಷ್ಟ್ರಗಳು, ಗಾಯಾಳು ಸೈನಿಕರನ್ನು ವೈದ್ಯರನ್ನು ಹಾಗೂ ಇತರ ಸಹಾಯಕರನ್ನು ತಟಸ್ಥರೆಂದು ಘೋಷಿಸಿ ಅಂತರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಬೇಕು ಎಂದು ತೀರ್ಮಾನಿಸಲಾಯಿತು.

Indian Red Cross Society
Karnataka State Branch

- ರೆಡ್ ಕ್ರಾಸ್ ಸಂಸ್ಥೆಯ ಮೂಲ ತತ್ವಗಳನ್ನು ಒಳಗೊಂಡ ಪ್ರಥಮ ಜಿನಿವಾ ಒಪ್ಪಂದವನ್ನು 1864 ರಲ್ಲಿ ಮಾಡಿಕೊಳ್ಳಲಾಯಿತು.
- ಅದನ್ನು ಡ್ಯೂನಾಂಟ್ ಸಹಿ ಮಾಡಿದರು. ಈ ಒಪ್ಪಂದಕ್ಕೆ 1864ರ 12ರಂದು 12 ರಾಷ್ಟ್ರಗಳು ಸಹಿ ಮಾಡಿದವು ಈ ಕಾರಣದಿಂದಲೇ ಆಗಸ್ಟ್ 12ನ್ನು "ವಿಶ್ವ ಜಿನಿವಾ ದಿನ"ಎಂದು ಆಚರಿಸಲಾಗುತ್ತಿದೆ.
- ಅನಂತರದ ದಿನಗಳಲ್ಲಿಯೂ ಯುದ್ಧ ಜರುಗುತ್ತಲೇ ಇದ್ದವು ಮತ್ತು ಅಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಲಾಗುತ್ತಿತ್ತು.
- ಒಟ್ಟಿನಲ್ಲಿ ಆಗಸ್ಟ್ 12ರ ಜಿನಿವಾ ಒಪ್ಪಂದ ವಿಶ್ವಶಾಂತಿಯನ್ನು ಭ್ರಾತೃತ್ವವನ್ನು ಮತ್ತು ಮಾನವೀಯತೆಯನ್ನು ಎತ್ತಿ ಹಿಡಿಯುವಲ್ಲಿಯ ಪ್ರಕ್ರಿಯೆಗೆ ಮುನ್ನುಡಿ ಬರೆಯಿತು.
- 1864ರ ವರೆವಿಗೂ ರಾಷ್ಟ್ರಗಳನ್ನು ಖಾಯಂ ಆಗಿ ಬದ್ಧರಾಗಿಸಲು ಯಾವುದೇ ಒಪ್ಪಂದಗಳಿರಲಿಲ್ಲ ಆದರೆ ಎರಡು ರಾಷ್ಟ್ರಗಳ ನಡುವೆ ಸೋತ ಸೈನ್ಯವನ್ನು ರಕ್ಷಿಸುವುದಕ್ಕಾಗಿ ಅಥವಾ ಗಾಯಗೊಂಡ ಸೈನಿಕರಿಗೆ ಚಿಕಿತ್ಸೆ ನೀಡಲು ತಾತ್ಕಾಲಿಕ ಒಡಂಬಡಿಕೆಗಳಾಗುತ್ತಿದ್ದವು ಅಂತಹ ಒಡಂಬಡಿಕೆಗಳು ಖಾಯಂ ಒಪ್ಪಂದಗಳಾಗಿರಲಿಲ್ಲ.
- ಈ ಕಾರಣದಿಂದಲೇ ಜಿನಿವಾ ಒಪ್ಪಂದ ರೆಡ್ ಕ್ರಾಸ್ ಮೂಲ ತತ್ವಗಳನ್ನು ಎತ್ತಿ ಹಿಡಿಯುವ ಮತ್ತು ಗೌರವಿಸುವ ದಿಶೆಯಲ್ಲಿ ಒಂದು ಮಹತ್ತರವಾದ ಹೆಜ್ಜೆಯಾಗಿದೆ.

1863 - The Committee of Five



A committee of five Swiss citizens first met in February 1863 to promote the ideas contained in Henry Dunant's book

Indian Red Cross Society
Karnataka State Branch

ಜಿನಿವಾ ಒಪ್ಪಂದಗಳು

- ಮೊದಲ ಜಿನಿವಾ ಒಪ್ಪಂದಕ್ಕೆ 1864 ಆಗಸ್ಟ್ 12ರಂದು ಸಹಿ ಹಾಕಲಾಯಿತು.
- ಎರಡನೇ ಒಪ್ಪಂದ 1906ರ ಜುಲೈ 6ರಂದು
- ಮೂರನೇ ಜಿನಿವಾ ಒಪ್ಪಂದ 1929 ರಂದು
- 4ನೇ ಜಿನಿವಾ ಒಪ್ಪಂದ 1946 ರ ಆಗಸ್ಟ್ 12 ರಂದು ಸಹಿ ಮಾಡಲ್ಪಟ್ಟಿದೆ.

- ಮೊದಲ ಎರಡು ಒಪ್ಪಂದಗಳು ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ ಸಂಬಂಧಿಸಿದ್ದರೆ, ಮೂರನೇ ಒಪ್ಪಂದ ಯುದ್ಧ ಖೈದಿಗಳಿಗೆ ಸಂಬಂಧಿಸಿದ ಒಪ್ಪಂದವಾಗಿದೆ.
- 4ನೇ ಒಪ್ಪಂದ ಯುದ್ಧ ಸಂದರ್ಭದಲ್ಲಿ ಯುದ್ಧೇತರ ನಾಗರೀಕ ವ್ಯಕ್ತಿಗಳ ಸಂರಕ್ಷಣೆಗೆ ಸಂಬಂಧಿಸಿದೆ. 4ನೇ ಒಪ್ಪಂದವು ಯುದ್ಧ ಸಮಯದಲ್ಲಿ ಆಗುವ ದಂಗೆಯ ನಿಯಂತ್ರಣದ ಬಗ್ಗೆಯೂ ಒಳಗೊಂಡಿದೆ.

Indian Red Cross Society
Karnataka State Branch

ಜಿನಿವಾ ಒಪ್ಪಂದದ ಸಾರಾಂಶ

1. ಯುದ್ಧರಂಗದಲ್ಲಿ ಖಾಯಿಲೆ ಹಾಗೂ ಗಾಯಾಳುಗಳನ್ನು ಗುರುತಿಸಬೇಕು, ರಕ್ಷಿಸಬೇಕು ಹಾಗೂ ವೈದ್ಯಕೀಯ ಉಪಚಾರ ಒದಗಿಸಬೇಕು, ಅಂಥವರ ರಾಷ್ಟ್ರೀಯತೆಯಲ್ಲಿ ಭಿನ್ನಬೇಧ ತೋರಬಾರದು.
2. ಯುದ್ಧದಲ್ಲಿ ಮೃತ ಪಟ್ಟವರನ್ನು ಪತ್ತೆ ಹಚ್ಚಬೇಕು ಹಾಗೂ ಅವರ ಮಾಹಿತಿ ವಿವರಗಳನ್ನು ರೆಡ್ ಕ್ರಾಸ್ ಸಂಸ್ಥೆಗೆ ಒದಗಿಸಬೇಕು.
3. ಗಾಯಗೊಂಡ ಸೈನಿಕರ ಹಾಗೂ ಶರಣಾಗತರಾದ ಸೇನಾ ತುಕಡಿಗಳ ಮೇಲೆ ಆಕ್ರಮಣ ಮಾಡಬಾರದು.
4. ತುರ್ತು ಚಿಕಿತ್ಸಾ ಘಟಕ, ವೈದ್ಯಾಧಿಕಾರಿಗಳು ಹಾಗೂ ಆಸ್ಪತ್ರೆ ಸಿಬ್ಬದಿ ಇವರ ಮೇಲೆ ದಾಳಿ ಮಾಡುವಂತಿಲ್ಲ. ಇವರನ್ನು ಯುದ್ಧ ತಟಸ್ಥರೆಂದು ಪರಿಗಣಿಸಬೇಕು. ಅವರಿಗೆ ಭದ್ರತೆಯನ್ನು ಒದಗಿಸಬೇಕು.
5. ಬಿಳಿ ಹಿನ್ನಲೆಯಲ್ಲಿನ ಕೆಂಪು ಕ್ರಾಸನ್ನು ಸುರಕ್ಷಾ ಲಾಂಛನವಾಗಿ ಮಾನ್ಯತೆ ನೀಡಬೇಕು.

Indian Red Cross Society
Karnataka State Branch

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

6. ಒಪ್ಪಂದದಲ್ಲಿ ನಮೂದಿಸಲ್ಪಟ್ಟ ಆಸ್ಪತ್ರೆ ಹಾಗೂ ಇತರ ಸಂಘಟನೆಗಳನ್ನು ಯುದ್ಧದಲ್ಲಿ ನಿರತರಾದವರು ಯುದ್ಧಕ್ಕೆ ಬೆಂಬಲಿಸುವ ಯಾವುದೇ ಯುದ್ಧ ಕಾರ್ಯಗಳಿಗಾಗಿ ಬಳಸಬಾರದು.
7. ಸೈನ್ಯಾಧಿಕಾರಿಗಳು, ಗಾಯಗೊಂಡ ಖಾಯಿಲೆಗಳಿಂದ ಮೃತರಾದ ಸೈನಿಕರ ಮಾಹಿತಿ ವಿವರಗಳನ್ನು ದಾಖಲಿಸಿಡುವ ಅಗತ್ಯವಿದೆ. ಈ ಮಾಹಿತಿಯನ್ನು ಕೇಂದ್ರೀಯ ಯುದ್ಧ ಖೈದಿಗಳ ಏಜೆನ್ಸಿ ಎಂಬ ಮಧ್ಯವರ್ತಿ ಏಜೆನ್ಸಿಯ ಮೂಲಕ ವಿರುದ್ಧ ಪಡೆಗೆ ತಿಳಿಸುವುದು.
8. ಯುದ್ಧರಂಗದ ವ್ಯಾಪ್ತಿ ಪ್ರದೇಶದಲ್ಲಿರುವ ಇತರ ನಾಗರೀಕ ಜನರನ್ನು ಹಾಗೂ ಪರಿಹಾರಕಾರಕ ಸಂಘಟನೆಗಳನ್ನು ಗಾಯಾಳುಗಳನ್ನು ಪತ್ತೆ ಹಚ್ಚುವಲ್ಲಿ ಹಾಗೂ ಅವರಿಗೆ ಚಿಕಿತ್ಸಾ ಉಪಚಾರವನ್ನು ಒದಗಿಸಲು ಸಹಾಯವನ್ನು ಪಡೆಯಬಹುದು. ಗಾಯಾಳುಗಳಿಗೆ ಉಪಚರಿಸುವಂತಹ ವ್ಯಕ್ತಿಗಳಿಗೆ ತೊಂದರೆ ನೀಡಬಾರದು.
9. ಸೈನ್ಯದಲ್ಲಿ ಪಾದ್ರಿಗಳನ್ನು ತಟಸ್ಥರೆಂದು ಗಮನಿಸಿ ರಕ್ಷಣೆ ಕೊಡಬೇಕು.

Indian Red Cross Society
Karnataka State Branch

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

10. ಯುದ್ಧಖೈದಿಗಳನ್ನು ಸುರಕ್ಷಿತ ಸ್ಥಳಗಳಲ್ಲಿಡಬೇಕು ಅವರಿಗೆ ಉತ್ತಮ ಆಹಾರ, ಬಟ್ಟೆ ಒದಗಿಸಬೇಕು, ಅಗತ್ಯವಾದಾಗ ವೈಧ್ಯಕೀಯ ಉಪಚಾರವನ್ನು ನೀಡಬೇಕು. ತಮ್ಮ ಇಷ್ಟದಂತೆ ಪೂಜಿಸುವ ಸ್ವಾತಂತ್ರ್ಯ ಅವರಿಗಿರಬೇಕು.

11. ನಿಗದಿಯ ಪತ್ರ ವ್ಯವಹಾರದ ಸೌಲಭ್ಯವನ್ನು ಅವರಿಗೆ ಒದಗಿಸಬೇಕು.

12. ಯುದ್ಧ ಖೈದಿಗಳನ್ನು ಗೌರವಾದರಗಳಿಂದ ನೋಡಿಕೊಳ್ಳಬೇಕು.

13. ಯುದ್ದದಲ್ಲಿನ ಗಾಯಾಳುಗಳನ್ನು ಖಾಯಿಲೆಯಿಂದ ನರಳುತ್ತಿರುವವರನ್ನು, ವೈಧ್ಯರನ್ನು ಹಾಗೂ ಆಸ್ಪತ್ರೆಗಳನ್ನು "ಯುದ್ಧೇತರ ಆಸ್ಪತ್ರೆ" ಗಳೆಂದು ಪರಿಗಣಿಸಬೇಕು ಅವುಗಳನ್ನು ಆಕ್ರಮಿಸಬಾರದು; ಅವುಗಳಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಒದಗಿಸಬೇಕು.

Indian Red Cross Society
Karnataka State Branch

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

14. ಖೈದಿಗಳು ತಮ್ಮ ಹೆಸರು, ವಿಳಾಸ, ಗುರುತಿನ ಸಂಖ್ಯೆ ಮತ್ತು ಸೇನಾ ಪಡೆಯ ವಿವರ ಇತ್ಯಾದಿಗಳನ್ನು ಕೊಡಬೇಕಾಗಿತ್ತದೆ.
15. ರೆಡ್ ಕ್ರಾಸ್ ಸಂಸ್ಥೆಯ ಅಂತರಾಷ್ಟ್ರೀಯ ಸಮಿತಿಗೆ ಪರಿಹಾರ ಸಾಮಾಗ್ರಿಗಳನ್ನು ವಿತರಿಸುವ ಸೌಲಭ್ಯವನ್ನು ಒದಗಿಸುವುದು.
16. ರೆಡ್ ಕ್ರಾಸ್ ಸಂಸ್ಥೆಯ ಅಂತರಾಷ್ಟ್ರೀಯ ಸಮಿತಿಯ ಪ್ರತಿನಿಧಿಗಳಿಗೆ ಯುದ್ಧ ಖೈದಿಗಳನ್ನು ಅವರ ಶಿಬಿರಗಳನ್ನು ಭೇಟಿಯಾಗುವ ಸೌಲಭ್ಯಗಳಿರಬೇಕು.
17. ಅವರ ಜೀವನ ಸ್ಥಿತಿ ಹಾಗೂ ಕುಂದು–ಕೊರತೆಗಳನ್ನು ತಿಳಿದುಕೊಳ್ಳಲು ಅವರೊಂದಿಗೆ ಖಾಸಗಿಯಾಗಿ ಸಮಾಲೋಚನೆ ಮಾಡಲು ಅವಕಾಶಗಳಿರಬೇಕು.
18. ಯುದ್ಧ ಖೈದಿಗಳನ್ನು ಅಮಾನವೀಯ ಕೃತ್ಯಗಳಿಂದ ರಕ್ಷಿಸಬೇಕು ಅವರನ್ನು ಪ್ರಾಯೋಗಿಕ ಉದ್ದೇಶಗಳಿಗಾಗಿ ಬಳಸಬಾರದು. ಸಂಪರ್ಕ ನ್ಯಾಯ ವಿಚಾರಣೆ ನಡೆಸದೆ, ಅವರನ್ನು ಮರಣ ದಂಡನೆಗೆ ಗುರಿ ಪಡಿಸುವಂತಿಲ್ಲ.

Indian Red Cross Society
Karnataka State Branch

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

19. ಯುದ್ಧ ಖೈದಿಗಳನ್ನು ಪ್ರತಿ ಆರು ತಿಂಗಳಿಗೊಮ್ಮೆ ವೈಧ್ಯಕೀಯ ತಪಾಸಣೆಗೆ ಒಳಪಡಿಸಬೇಕು.
20. ಯುದ್ಧ ಖೈದಿಗಳನ್ನು ಅವರ ವಯಸ್ಸು, ಲಿಂಗ ಹಾಗೂ ಅನುಗುಣವಾಗಿ ಕಾರ್ಮಿಕರಾಗಿ ಉಪಯೋಗಿಸಬಹುದು.
21. ಅಂಥ ಯುದ್ಧ ಖೈದಿ ಕಾರ್ಮಿಕರಿಗೆ ಅವರ ದರ್ಜೆಗನುಸಾರವಾಗಿ ಅವರು ಮಾಡಿದ ಕೆಲಸಕ್ಕೆ ಸಂಬಳ ಕೊಡಬೇಕು.
22. ಯುದ್ಧ ಖೈದಿಗಳು ಗುಪ್ತ ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಅನುಮತಿ ಇರಬೇಕು. ಈ ಪ್ರತಿನಿಧಿಗಳು ಸೈನ್ಯದ ಅಧಿಕಾರಿಗಳನ್ನು ಹಾಗೂ ರೆಡ್ ಕ್ರಾಸ್ ನ ಅಂತರಾಷ್ಟ್ರೀಯ ಸಮಿತಿಯ ಯುದ್ಧ ಖೈದಿಗಳ ಪರವಾಗಿ ಪ್ರಾತಿನಿಧ್ಯ ವಹಿಸಿ ಸಂಪರ್ಕಿಸುತ್ತಾರೆ.

Indian Red Cross Society
Karnataka State Branch

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

23. ಸುರಕ್ಷಿತ ವಲಯಗಳನ್ನು ನಿರ್ಮಿಸಬೇಕು. ಇವುಗಳೆಂದರೆ ಯುದ್ಧ ಗಾಯಾಳು ರಕ್ಷಿಸಲು ವ್ಯವಸ್ಥೆ ಮಾಡಿದ ಆಸ್ಪತ್ರೆಗಳು ಮತ್ತು ಪ್ರದೇಶಗಳು. ಇಲ್ಲಿ ಗಾಯಾಳು ಸೈನಿಕರನ್ನು, ವೃದ್ಧ ವ್ಯಕ್ತಿಗಳನ್ನು 15 ವರ್ಷಕ್ಕಿಂತ ಕಿರಿಯ ಮಕ್ಕಳ ತಾಯಂದಿರನ್ನು ಯುದ್ಧ ಪರಿಣಾಮಗಳಿಂದ ರಕ್ಷಿಸುವ ಕಾರ್ಯವನ್ನು ಈ ಸುರಕ್ಷಿತ ವಲಯದಲ್ಲಿ ಕೈಗೊಳ್ಳಲಾಗುತ್ತದೆ.

ಯುದ್ಧನಿರತ ಪಕ್ಷಗಳು ತಾವು ಆಕ್ರಮಿಸಿಕೊಂಡ ಅಥವಾ ಮುತ್ತಿಗೆ ಹಾಕಿದ ಸೈನ್ಯದಿಂದ ಗಾಯಾಳು ಸೈನಿಕರನ್ನು, ರೋಗಗ್ರಸ್ಥರನ್ನು, ವೃದ್ಧರನ್ನು, ಮಕ್ಕಳನ್ನು ಹಾಗೂ ಗರ್ಭಿಣಿ ತಾಯಂದಿರನ್ನು ತಮ್ಮ ಆಕ್ರಮಣದಿಂದ ಹೊರತುಪಡಿಸಬೇಕು. ಪಾದ್ರಿಯರು, ವೈಧ್ಯರು, ವೈಧ್ಯಕೀಯ ಸಾಮಾಗ್ರಿ ಇತ್ಯಾದಿಗಳನ್ನು ಇಂಥ ಪ್ರದೇಶಗಳಿಗೆ ಮುಕ್ತವಾಗಿ ಚಲಿಸಲು ಅವಕಾಶವಿರಬೇಕು.

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

24. ವೈದ್ಯಕೀಯ ಹಾಗೂ ಆಸ್ಪತ್ರೆ ಸಾಮಾಗ್ರಿಗಳನ್ನು ಹಾಗೂ ಧಾರ್ಮಿಕ ಪೂಜಾ ಸಾಮಾಗ್ರಿಗಳನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೇ ಸಾಗಿಸಲು ಅನುಮತಿಯಿರಬೇಕು.
25. ಯುದ್ಧದಿಂದ ಅನಾಥರಾದ ಅಥವಾ ಕುಟುಂಬದಿಂದ ಬೇರ್ಪಟ್ಟ 15 ವಯಸ್ಸಿಗಿಂತ ಕಿರಿಯ ವಯಸ್ಸಿನ ಮಕ್ಕಳನ್ನು ಅವರ ಧಾರ್ಮಿಕ ಪದ್ಧತಿಯಂತೆ ಶಿಕ್ಷಣ ಹಾಗೂ ಇನ್ನಿತರ ವ್ಯವಸ್ಥೆ ಒದಗಿಸಿ ನೋಡಿಕೊಳ್ಳಬೇಕು.
26. ವೈರಿಪಡೆಯಿಂದ ಎಲ್ಲ ವ್ಯಕ್ತಿಗಳೂ, ದೂರ ಪ್ರದೇಶದಲ್ಲಿರುವ ತಮ್ಮ ಕುಟುಂಬದವರಿಗೆ ಕ್ಷೇಮ ಸಮಾಚಾರವನ್ನು ತಲುಪಿಸುವ ಅವರಿಂದ ಪಡೆಯುವುದಕ್ಕಾಗಿ ಅನುಮತಿಯಿರಬೇಕು.
27. ಆಕ್ರಮಿತ ಪ್ರದೇಶದ ಗಡಿಯಿಂದ ಆಕ್ರಮಿಸುವ ಅಧಿಕಾರಿಶಾಹಿಯ ಪ್ರದೇಶಕ್ಕೆ ಆಶ್ರಿತ ವ್ಯಕ್ತಿಗಳನ್ನು ಸ್ಥಳಾಂತರಿಸುವುದನ್ನು ನಿಷೇಧಿಸಲಾಗುವುದು.

Indian Red Cross Society
Karnataka State Branch

ವಿಶ್ವ ಜಿನಿವಾ ಒಪ್ಪಂದದ ಸಾರಾಂಶ

28. ಆಕ್ರಮಿಸುವ ಅಧಿಕಾರ ಶಾಹಿಯ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕಾಗಿ ನಿಯೋಜಿತವಾಗಿರುವ ಸಂಸ್ಥೆಗಳೊಂದಿಗೆ ಸೌಹಾರ್ದತೆಯಿಂದ ವರ್ತಿಸಬೇಕು.

29. ಆಕ್ರಮಿಸುವ ಅಧಿಕಾರ ಶಾಹಿಯ ಕಾನೂನು ಮತ್ತು ಸುವ್ಯವಸ್ಥೆಗೆ ಹೊಣೆಗಾರನಾಗಿರುತ್ತದೆ.

30. ಆಕ್ರಮಿಸಿರುವ ಪ್ರದೇಶದ ನಾಗರಿಕರಿಗೆ ಆಹಾರದ ಹಾಗೂ ಇತರ ಸಾಮಾಗ್ರಿಗಳ ಸಮರ್ಪಕ ಪೂರೈಕೆಗಾಗಿ ಆಕ್ರಮಿಸುವ ಅಧಿಕಾರ ಅಧಿಕಾರ ಶಾಹಿಯು ವ್ಯವಸ್ಥೆ ಮಾಡಬೇಕು.

31. ಖಾಸಗಿ ಆಸ್ತಿಗಳನ್ನು ಹಾಳು ಮಾಡುವುದನ್ನು ನಿಷೇಧಿಸಲಾಗಿದೆ.

32. ಜನರಿಗೆ ಪರಿಹಾರ ಸಾಮಾಗ್ರಿ ಒದಗಿಸಲು ಮತ್ತು ತನ್ನ ಮಾನವೀಯ ಕಾರ್ಯಗಳನ್ನು ನಿರ್ವಹಿಸಲು ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗೆ ಅನುಮತಿಯಿರಬೇಕು.

33. ಬಂಧಿತ ನಾಗರೀಕರನ್ನು ಕೆಲಸ ಮಾಡಲಿಕ್ಕೆ ಒತ್ತಾಯ ಪಡಿಸಬಾರದು.

Indian Red Cross Society
Karnataka State Branch

References:

1. https://www.icrc.org/en/war-and-law/treaties-customary-law/geneva-conventions
2. Https://www.un.org/en/genocideprevention/documents/atrocity-crimes/Doc.33_GC-IV-EN.pdf
3. https://youtu.be/wF5Z1RHxKTs
4. https://vijaykarnataka.com/education/general-knowledge/did-you-know/pakistan-violated-geneva-conventions-by-tweeting-of-captured-indian-pilot/articleshow/68201485.cms
5. https://m.varthabharati.in/article/2021_08_12/302285

DEVELOPED BY YOUTH RED CROSS, IRCS, KSB, BENGALURU